ಬಿಳಿ ಜೋಳ ಜಿಲ್ಲೆಯ ಪ್ರಮುಖ ಬೆಳೆಗಳು. ರಾಯಚೂರು ಜಿಲ್ಲೆಯಲ್ಲಿ ಹತ್ತಿ ವಾಣಿಜ್ಯ ಬೆಳೆಯಾಗಿದ್ದು, ರಾಯಚೂರು ನಗರದ ಹತ್ತಿ ಮಾರುಕಟ್ಟೆಯು ಏಷ್ಯಾದಾಗ ಬಹಳ ದೊಡ್ಡ ಹತ್ತಿ ಮಾರುಕಟ್ಟೆಯಾಗ್ಯಾದ. ರಾಯಚೂರಿನ ಮಾರುಕಟ್ಟೆಗೆ ಪಕ್ಕದ ರಾಜ್ಯಗಳಾದ ತೆಲಂಗಾಣ, ಆಂಧ್ರಪ್ರದೇಶ ಮತ್ತು ರಾಜ್ಯದ ಯಾದಗಿರಿ ಇಂದ ಹತ್ತಿ ಮಾರಾಕ, ಖರೀದಿಸಾಕ ಬರ್‍ತಾರ. ಹತ್ತಿ ಹೆಚ್ಚಾಗಿ ಬೆಳೆಯುವುದರಿಂದ ಇಲ್ಲಿ ಹತ್ತಿ ಜಿನ್ನಿಂಗ್ ಕಾರ್ಖಾನೆಗಳು ಅದಾವ.

ಭತ್ತ, ಹತ್ತಿ, ಜೋಳವನ್ನು ಬೆಳೆಯುವ ಇಲ್ಲಿ ಹೆಚ್ಚಾಗಿ ಜೋಳದ ಊಟವನ್ನು ಮಾಡ್ತಾರ. ತರಕಾರಿಗಳು, ನಮನ್ ನಮೂನೆ ಕಾಳ್ ಕಡಿಗಳು ರೊಟ್ಟಿ ಊಟದ ರುಚಿಯನ್ನು ಹೆಚ್ಚಿಸ್ತಾವ. ರೊಟ್ಟಿ, ಚಪಾತಿ, ಅನ್ನ ಊಟ ಅಲ್ದ, ನಮ್ ಭಾಗ್ದಲ್ಲಿ ಮಂಡೋಳು ವಗ್ಗಣೆ ಮಿರ್ಚಿ ಬಹಳ ಫೇಮಸ್! ಎಲ್ಲ ಕಡೆ ಇರುವಂಗ ಸಸ್ಯಾಹಾರಿ ಮತ್ತು ಮಾಂಸಾಹಾರಿ ಜನರು ಇಲ್ಲು ಅರಾ. ಮುಂಜಾನಿ ನಾಷ್ಟಕ್ಕ ಮನ್ಯಾಗ ರೊಟ್ಟಿ ಕಾಯಿಪಲ್ಲೆ, ಪೂರಿ, ಇಡ್ಲಿ, ದೋಸೆ, ಉಪ್ಪಿಟ್ಟು, ಪಲಾವ್, ವಗ್ಗಣೆ ಮಾಡ್ತಾರ. ಟಿಫನ್, ಊಟ ನೀಡುವ ರಸ್ತೆ ಬದಿಯ ಬಂಡಿಗಳು, ತಟ್ಟಿ ಹೋಟೆಲ್‌ಗಳು, ದೊಡ್ಡ ಹೋಟೆಲ್‌ಗಳು, ಖಾನಾವಳಿಗಳು, ಬಿರಿಯಾನಿ ಹೋಟೆಲ್‌ಗಳಿಗೇನು ಇಲ್ಲಿ ಕೊರತೆ ಇಲ್ಲ! ಇಲ್ಲಿ ಚಹಾ ವಿಶೇಷ ಪಾನೀಯ ಆಗ್ಯಾದ. ಯಾರಾದ್ರು ಸಿಕ್ರೆ ಮೊದ್ಲು ಚಹ ಕುಡಿಯೋಕೆನೇ ಹೋಗೋದು. ಕೆಂಡದಂತಹ ಬಿಸ್ಲಾಗ ನಾವು ಚಹಾವನ್ನೇ ಕುಡಿತಿವಿ!


ರಾಯಚೂರು ನಗರದ ಗಂಜ್ ವಗ್ಗಣೆ ಎಂತವರನ್ನು ಸಹ ಮೋಡಿ ಮಾಡಿ ಬಿಡ್ತಾದ. ಇಲ್ಲಿನ ವಗ್ಗಣೆಯ ರುಚಿಗೆ ಮನಸೋಲದವರೇ ಇರಂಗಿಲ್ಲ. ಬಿಸಿ ಬಿಸಿ ವಗ್ಗಣೆಯ ಜತಿ ಮಿರ್ಚಿ, ಬೆಳ್ಳುಳ್ಳಿ ಖಾರದ ಪುಡಿ, ಮೊಸರು ನೀಡ್ತಾರ. ಇವುಗಳನ್ನು ಕಲಸಿಕೊಂಡು ತಿಂದರಾ... ಆಹಾ! ಸ್ವರ್ಗನೇ ಕಾಣ್ತೇರಿ!

ರಾಯಚೂರಿನ ಸುತ್ತಲಿನ ಮನ್ಸಲಾಪುರ, ಮಲಿಯಬಾದ್, ಬೋಳಮಾನದೊಡ್ಡಿ, ಮರ್ಚೆಡ್, ಮಂತ್ರಾಲಯ ರಸ್ತೆ, ಚಂದ್ರಬಂಡಾ ರಸ್ತೆ, ಗದ್ವಾಲ್ ರಸ್ತೆ, ರಾಂಪೂರ ಮುಂತಾದ ಪ್ರದೇಶಗಳಲ್ಲಿ ಹೆಚ್ಚು ಪಕ್ಷಿಗಳು ನೋಡಲು ಸಿಗ್ತಾವ. ರಾಯಚೂರಿನ ಹೊರವಲಯದಲ್ಲಿ ನವಿಲುಗಳು ಸಿಗ್ತಾವ. ಹೊಲ, ಬೆಟ್ಟಗುಡ್ಡಗಳಲ್ಲಿ ಹಿಂಡು ಹಿಂಡಾಗಿ ನಮಗೆ ಕಾಣುತಾವ. ಒಂದು 'ನವಿಲುಧಾಮ' ಎಂದು ಘೋಷಿಸುವಷ್ಟು ನವಿಲುಗಳ ಸಂತತಿ ಇಲ್ಲಿ ಅದ.

ರಾಯಚೂರಿನ ಗಡಿಗೆ ಹೊಂದಿಕೊಂಡು ಇಲ್ಲಿ ಕನ್ನಡಿಗರು ಅದಾರ. ಇವ್ರು ಕನ್ನಡದ ಕುರಿತು ಅಪಾರ ಅಭಿಮಾನ ಹೊಂದ್ಯಾರ. ನಮ್ಮ ಗಡಿನಾಡ ಕನ್ನಡಿಗರು ಹಲವಾರು ಸಮಸ್ಯೆಗಳಿಂದ ಕೊರಗ ಕತ್ಯಾರ. ಗಡಿಯ ಭಾಗದಲ್ಲಿರುವ ತೆಲಂಗಾಣದ ರಾಜ್ಯದ ನಾರಾಯಣ ಪೇಟೆಯ ಗ್ರಾಮವಾದ ಕೃಷ್ಣಾದಲ್ಲಿನ ಮಾತೃಭಾಷೆ ಕನ್ನಡವಾಗಿರುವ ಕನ್ನಡಿಗರ ಕಷ್ಟ ಏನಂತ ಹೇಳ್ಲಿ. ಶಿಕ್ಷಣಕ್ಕ ಸಂಬಂಧಿಸಿದಾಂಗ ಇಲ್ಲಿನ ಮಕ್ಳು ತಮ್ಮ ಉಜ್ವಲವಾದ ಭವಿಷ್ಯದಿಂದ ವಂಚಿತರಾಗ್ಯಾರ. ಇಲ್ಲಿನ ಕನ್ನಡ ಶಾಲ್ಯಾಗ ಕನ್ನಡ ಪುಸ್ತಕಗಳು ಬರವಲ್ವು, ಅದಲ್ದ ಮುಂದಿನ ಶಿಕ್ಷಣ ಪಡೆಯಾಕ ಒದ್ದಾಡಕತಾರ.

ನೀವು ಹಾಕ್ಕೋತಿರಲ್ಲ ಚಿನ್ನ ಅದು ನಮ್ ರಾಯಚೂರದ! ದೇಶಕ್ಕೆ ಚಿನ್ನ ನೀಡುವ ಸಕ್ರಿಯವಾದ ಏಕೈಕ ಗಣಿ ನಮ್ ಲಿಂಗಸೂಗೂರಿನ ಹಟ್ಟಿಯಗಾದ. ಹತ್ತಿ, ಭತ್ತವನ್ನು ಬಹಳ ಬೆಳೆಯುವ ನೆಲ ರಾಯಚೂರು ಜಿಲ್ಲೆಯಾಗಿದ್ದು, ಲಿಂಗಸೂಗೂರಿನ ಸಾವಿರ ಬಾವಿಯ ಮನ್ ಸಾಹೇಬ, ಮಸ್ಕಿಯ ಅಶೋಕ ಶಿಲಾಶಾಸನ, ಇದೇ ಮಸ್ಕಿಯ ಮಲ್ಲಿಕಾರ್ಜುನ ದೇವಾಲಯದ ಗೋಡೆಯ ಮೇಲಿನ ಉಬ್ಬು ಶಿಲ್ಪಕಲೆಯ ಚಿತ್ರ ಎನ್‌ಸಿಇಆರ್‌ಟಿ ಲೋಗೋ ಆಗಿದ್ದು ಜಿಲ್ಲೆಯ, ನಮ್ಮ ನಾಡಿನ ಹೆಮ್ಮೆ ಅದ.

ರಾಯಚೂರನ್ನು ಹಿಂದುಳಿದ ಪ್ರದೇಶವೆಂದು ಕರಿಬ್ಯಾಡ್ರಿ ಅಂತ ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂ ಅವರ ಹೇಳ್ಯಾರ ನೋಡ್ರಿ. ಅವ್ರು 2013ರಾಗ ವಿದ್ಯಾರ್ಥಿಗಳ ಜೊತಿ ಸಂವಾದದಾಗ ಮಾತಾಡಕಲ್ಕ ರಾಯಚೂರು ಪ್ರದೇಶವು ಹಿಂದುಳಿದದ ಎಂಬ ಮಾತಿಗಿ ಕಲಾಂ ಅವರು ಬಹಳ ಚೆಂದ್ ಆಗಿ ಹಿಂಗ ಹೇಳ್ಯಾರ... 'ನೀವು ಸುಳ್ಳು ಹೇಳಬೇಡಿ, ಈ ಪ್ರದೇಶ, ಇಲ್ಲಿಯ ಹುಡುಗರು ಕೇಳುವ ಪ್ರಶ್ನೆಗಳು, ಅವರ ಆಸಕ್ತಿಯು ನಮ್ಮ ದಿಲ್ಲಿಯ ಯಾವ ವಿಶ್ವವಿದ್ಯಾಲಯ, ಕಾಲೇಜುಗಳಲ್ಲೂ ಇಲ್ಲ, ನೀವು ಎಂದಿಗೂ ಈ ಪ್ರದೇಶವನ್ನು ಹಿಂದುಳಿದಿದೆ ಎಂದು ಹೇಳಬೇಡಿ, ಇದು ನನ್ನ ಆರ್ಡರ್!'. ■



ಐತಿಹಾಸಿಕ ಗುಂಬಜ್
ಅರಬ್ ಮೊಹಲ್ಲ

ಕರ್ನಾಟಕದ ವಿವಿಧ ಜಿಲ್ಲೆಗಳ ನುಡಿಸೊಬಗನ್ನು ಪರಿಚಯಿಸುತ್ತಿರುವ 'ಚೆನ್ನುಡಿ' ಅಂಕಣಕ್ಕೆ ನೀವೂ ಬರೆಯಬಹುದು. ನಿಮ್ಮೂರಿನ ಭಾಷೆಯ ಸೊಗಡನ್ನು ಓದುಗರೊಂದಿಗೆ ಹಂಚಿಕೊಳ್ಳಬಹುದು. ಲೇಖನ 1000 ಪದಮಿತಿಯಲ್ಲಿ, ನುಡಿ ಅಥವಾ ಯುನಿಕೋಡ್‌ನಲ್ಲಿರಲಿ.
ಇಮೇಲ್–
**editorsu@sudha.co.in**



ಮಲಿಯಾಬಾದ್‌ನಲ್ಲಿನ ಅಲಂಕೃತ ಕಲ್ಲಾನೆಗಳು